ಕೂಡಾ ಹುಣಸೂರಿನಿಂದ ಬಹಳ ದೂರವೇನು ಇರುವುದಿಲ್ಲ. ಆದೂ ಆಲ್ಲದೆ, ಸುಮಾರು ನಾಲ್ಕು ವರ್ಷಗಳ ಹಿಂದೆ ಹುಣಸೂರು ವಿಭಾಗದಿಂದ ಕೊಡಗಿನ ಕೆಲವು ಗ್ರಾಮಗಳನ್ನು ಮಡಿಕೇರಿ ವಿಭಾಗಕ್ಕೆ ವರ್ಗಾಯಿಸಿ ಶ್ರೀಮಂಗಲ ವಲಯವನ್ನು ನಿರ್ಮಿಸಿದೆ.

೫) ಉದ್ಭವಿಸುವುದಿಲ್ಲ.

ಶ್ರೀಮತಿ ಸುಮಾ ವಸಂತ್.—ಸನ್ಮಾನ್ಯ ಅಧ್ಯಕ್ಷರೇ, ಇದು ಸಾರ್ವಜನಿಕರ ಸಾಕಷ್ಟು ದಿನಗಳ ಬೇಡಿಕೆಯಾಗಿದೆ. ಪಿರಿಯಾಪಟ್ಟಣ, ಹುಣಸೂರು, ಕೆ. ಆರ್. ನಗರಕ್ಕೆ ಬೇಕಾದರೆ ಹುಣಸೂರಿನಲ್ಲಿ ಕೇಂದ್ರಸ್ಥಾನ ಇರಬಹುದು. ಆದರೆ ವೀರರಾಜಪೇಟೆ ಕ್ಷೇತ್ರದ ಜನರು ಹುಣಸೂರಿಗೆ ಹೋಗಿ ಬರುವುದಕ್ಕೆ ತ್ರಾಸವಾಗುತ್ತದೆ. ಈ ಕಚೇರಿಯನ್ನು ವೀರರಾಜಪೇಟೆಯಲ್ಲಿ ಸ್ಥಾಪಿಸಬೇಕು, ಇಲ್ಲದಿದ್ದರೆ ಇದನ್ನು ಮಡಿಕೇರಿಗೆ ವರ್ಗಾಯಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯೆಯರ ಸೂಚನೆಯನ್ನು ನಾನು ಗಮನದಲ್ಲಿಡುತ್ತೇನೆ.

ದಾವಣಗೆರೆಯಲ್ಲಿ ಮುಚ್ಚಿರುವ ಟೆಕ್ಸ್‌ಟೈಲ್ ಮಿಲ್ಲುಗಳನ್ನು ಪ್ರಾರಂಭಿಸುವ ಕುರಿತು.

೧೯೭೮. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಭಾರಿ ವಸ್ತ್ರ ಮಾಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಾವಣಗೆರೆಯಲ್ಲಿ ಕಳೆದ ಒಂದು ವರ್ಷದಿಂದ ಮುಚ್ಚಿರುವ ಬಟ್ಟೆ ಗಿರಣಿಗಳ ಸಂಖ್ಯೆ ಎಷ್ಟು ?

ಆ) ಮುಚ್ಚಿರುವ ಗಿರಣಿಗಳನ್ನು ಪುನರ್ ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಹಾಗಿದ್ದಲ್ಲಿ, ಆ ಪೈಕಿ ಪುನರ್ ಪ್ರಾರಂಭಿಸಿದ ಗಿರಣಿಗಳ ಸಂಖ್ಯೆ ಎಷ್ಟು ; ಮತ್ತು ಮುಚ್ಚಿರುವ ಗಿರಣಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು.?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೩ ಗಿರಣಿಗಳು.

ಆ) ಗಣೇಶ ಜವಳಿ ಗಿರಣಿ ಹಾಗೂ ಸಿದ್ದೇಶ್ವರ ಜವಳಿ ಗಿರಣಿಗಳು ರೋಗಗ್ರಸ್ಥ ಕೈಗಾರಿಕಾ ಕಂಪನಿಗಳ (ವಿಶೇಷ ಅವಕಾಶ) ಕಾಯಿದೆ ೧೯೮೫ರ ಅಡಿಯಲ್ಲಿ ಕೈಗಾರಿಕಾ ಮತ್ತು ಆರ್ಥಿಕ ಪುನರ್ ರಚನಾ ಮಂಡಲಿಗೆ ಅರ್ಜಿ ಸಲ್ಲಿಸಿವೆ. ಕೈಗಾರಿಕಾ ವ.ತ್ತು ಆರ್ಥಿಕ ಪುನರ್ ರಚನಾ ಮಂಡಲಿಯು (ಬಿಐಎಫ್‌ಆರ್) ಘಟಕಗಳ ಪುನರುಜ್ಜೀವನ ಯೋಜನೆಗಳನ್ನು ರೂಪಿಸಿದಂತಹ ಸಂದರ್ಭಗಳಲ್ಲಿ ಅಂತಹ ಗಿರಣಿಗಳಿಗೆ ಕೆಲವೊಂದು ಸೌಲಭ್ಯ ರಿಯಾಯಿತಿಗಳನ್ನು ನೀಡುವ ವಿಚಾರವು ಪರಿಶೀಲನೆಯಲ್ಲಿದೆ. ಜಿಗಟೇರಿ ಜವಳಿ ಗಿರಣಿಗೆ ಸಂಬಂಧಿಸಿದಂತೆ ಪುನರುಜ್ಜೀವನ ವರದಿಯು ತಯಾರಿಕೆಯಲ್ಲಿದೆ.

ಇ) ಯಾವುದೇ ಗಿರಣಿಗಳು ಪುನರ್ ಆರಂಭವಾಗಿಲ್ಲ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ದಾವಣಗೆರೆಯ ಮೂರು ಮಿಲ್‌ಗಳು ಸುಮಾರು ಒಂದು ವರ್ಷದಿಂದ ಮುಚ್ಚಿವೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರವಲ್ಲಿ ಸಹ ಇದನ್ನು ಹೇಳಿದ್ದಾರೆ. ಬಿ.ಐ.ಎಫ್.ಆರ್. ಘಟಕಗಳ ಪುನರ್ ಜೀವನ ಗೊಳಿಸುವುದಕ್ಕೆ ಯೋಜನೆ ರೂಪಿಸಿದ್ದೇವೆಂದು ಸಹ ಹೇಳಿದ್ದಾರೆ. ಈ ಮಿಲ್‌ಗಳ ಮಾಲೀಕರು ಕಾರ್ಮಿಕ ಮಂತ್ರಿಗಳು ಸಭೆ ಕರೆದಾಗ ಬರುತ್ತಿಲ್ಲ, ಅವರಿಗೆ ಈ ಮಿಲ್‌ಗಳು ನಡೆಸುವುದಕ್ಕೆ ಉದ್ದೇಶವಿದೆಯೋ ಇಲ್ಲವೋ ಗೊತ್ತಿಲ್ಲ. ಮಿಲ್‌ಗಳನ್ನು ನಡೆಸುವ ಉದ್ದೇಶ ಅವರಿಗೆ ಇರದಿದ್ದರೆ ಆ ಮಿಲ್‌ಗಳನ್ನು ಬೇರೆಯವರು ನಡೆಸುವುದಕ್ಕೆ ಸರ್ಕಾರ ಏನಾದರೂ ಅವಕಾಶ ಮಾಡಿ ಕೊಡುತ್ತದೆಯೇ ? ಈ ಮಿಲ್‌ಗಳು ಮುಚ್ಚಿ ಒಂದು ವರ್ಷವಾಗಿರುವುದರಿಂದ ಮಿಲ್‌ನಲ್ಲಿ ಕೆಲಸ ಮಾಡತಕ್ಕಂಥ ಸುಮಾರು ಮೂರು ಸಾವಿರ ಕಾರ್ಮಿಕರ ಪೈಕಿ ಅನೇಕ ಜನ ಸತ್ತಿದ್ದಾರೆ, ಕೆಲವರು ಬಾವಿಗೆ ಬಿದ್ದು ಸತ್ತಿದ್ದರೆ ಇನ್ನು ಕೆಲವರು ಸಂಸಾರ ನಿರ್ವಹಣೆ

ಮಾಡಲಾಗದೆ ಸತ್ತಿದ್ದಾರೆ ಇನ್ನು ಕೆಲವರು ಹೃದಯಾಘಾತದಿಂದ ಸತ್ತಿದ್ದಾರೆ. ಈ ರೀತಿ ಸತ್ತಿರತಕ್ಕಂಥ ಜನರಿಗೆ ಪರಿಹಾರ ಒದಗಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಮಾನವಿಯನ್ನು ಅರ್ಪಿಸಿದ್ದೆ. ಇದರ ಬಗ್ಗೆ ಏನಾದರೂ ಸರ್ಕಾರ ಸಹಾಯ ಮಾಡುವುದಕ್ಕೆ ವಿಚಾರ ಬರುತ್ತದೆಯೇ? ಇನ್ನು ಚಿಗಟೇರಿ ಮಿಲ್‌ನ್ನು ಪುನಃ ಆರಂಭಿಸುವುದು ನಮ್ಮ ರಾಜ್ಯ ಸರ್ಕಾರದಿಂದಲೇ ಆಗಬೇಕಾದಂತಹ ಕೆಲಸ ಅದು ಕೂಡ ಆಗಿಲ್ಲ. ಇದು ಸುಮಾರು ಒಂದು ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಮಾನ್ಯ ಕಾರ್ಮಿಕ ಸಚಿವರು ಸಭೆ ಕರೆಯುತ್ತಾರೆ ಆದರೆ ಅವರು ಬರುವುದಿಲ್ಲ. ಈ ಗಿರಣಿ ಸಹ ಇನ್ನೂ ಪ್ರಾರಂಭವಾಗಿಲ್ಲ. ಬಟ್ಟೆ ಗಿರಣಿ ಕೈಗಾರಿಕೆಗಳು ಈ ಪರಿಸ್ಥಿತಿಯಲ್ಲಿರುವುದರಿಂದ ಕಾರ್ಮಿಕರಿಗೆ ಬಹಳ ತೊಂದರೆಯಾಗಿದೆ. ಇನ್ನು ಎಷ್ಟು ದಿವಸಗಳಲ್ಲಿ ಈ ಗಿರಣಿಗಳನ್ನು ಪ್ರಾರಂಭಿಸತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ?

ಶ್ರೀ ಜಿ. ಹೆಚ್. ಪಟೀಲ್.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಿಗೆ ವಿಚಾರ ಜೆನ್ನಾಗಿ ಗೊತ್ತಿದೆ. ಈ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಸಾಕಷ್ಟು ಪ್ರಯತ್ನ ಮಾಡಿದೆ ಆದರೆ ಕೆಲವೊಂದು ಕಾರಣಗಳು ತೊಡಕ್ಕುಗಳು ಇವೆ. ಬುತ್ತು ಹಣಕಾಸಿನ ಇತ್ಯಿತ್ಯಿಗಳು ಇರುತ್ತವೆ. ಖಾಸಗಿ ಮಿಲ್‌ಗಳು ರೋಗಗ್ರಸ್ತವಾದಾಗ ಅವುಗಳನ್ನು ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಆದು ಮಾನ್ಯ ಸದಸ್ಯರಿಗೂ ಗೊತ್ತಿದೆ. ದಾವಣಗೆರೆಯ ಮಿಲ್‌ಗಳ ವಾಸ್ತವೀಕತೆಯನ್ನು ಮನಗಂಡು ನಾವು ಮಿಲ್ ಮಾಲೀಕರನ್ನು ಮತ್ತು ಬ್ಯಾಂಕ್‌ಗಳವರನ್ನು ಕರೆಸಿ ಮಾತಾನಾಡಿದ್ದೇವೆ. ದುರ್ದೈವದಿಂದ ದೆಹಲಿಯಲ್ಲಿ ಇದಕ್ಕೆ ಒಂದು ಸಮಿತಿ ಇದೆ. ಆ ಸಮಿತಿಯವರು ರೋಗಗ್ರಸ್ತ ಕಾರ್ಖಾನೆಗಳಿಗೆ ಹಣಕಾಸಿನ ಸಹಾಯ ಕೊಡತಕ್ಕಂಥಾದ್ದು ಐ. ಡಿ. ಬಿ. ಬ್ಯಾಂಕ್‌ಗಳಿಂದ ಸಾಲ ಕೊಡಿಸತಕ್ಕಂಥಾದ್ದು. ಇದ. ಇದು ಕೇಂದ್ರ ಸರ್ಕಾರದ ಸಮಿತಿ ಆಗಿದೆ. ಆದಕ್ಕೆ ನಾವು ಈ ಮಿಲ್‌ಗಳನ್ನು ರೆಫರ್ ಮಾಡಿದ್ದೇವೆ. ಗಣೇಶ ಮತ್ತು ಸಿದ್ದೇಶ್ವರ ಈ ಎರಡೂ ಗಿರಣಿಗಳನ್ನು ಆ ಸಮಿತಿಗೆ ನಾವು ರೆಫರ್ ಮಾಡಿದ್ದೇವೆ, ಆದರೆ ಚಿಟಗೇರಿ ಗಿರಣಿ ಈ ಕೆಟಗರಿಯಲ್ಲಿ ಬರುವುದಿಲ್ಲ. ಈ ಚಿಟಗೇರಿ ಗಿರಣಿಗೆ ಸರ್ಕಾರದ ಯಾವುದೇ ಸಂಸ್ಥೆ ಹಣ ಹಾಕಿಲ್ಲ. ಆದಕ್ಕೆ ನಾವು ನಮ್ಮಲ್ಲಿರುವ ಟೆಕ್ನಾಕ್ ಸಲಹಾ ಸಮಿತಿ ಇದೆ. ಆದಕ್ಕೆ ರೆಫರ್ ಮಾಡಿ ವೆಯಬಲ್ಟಿ ನೋಡಿ ಸಹಾಯ ಮಾಡಿದರೆ ಇದು ಬದುಕುತ ದೆಯೇ ಇಲ್ಲವೋ ಎಂಬುದನ್ನು ತೀಮಾನಿಸಿಕೊಳ್ಳಬೇಕಾಗಿದೆ. ನಾನು ಮೊದಲೇ ಹೇಳಿದಹಾಗೆ ಗಣೇಶ್ ಮತ್ತು ಸಿದ್ದೇಶ್ವರ ಗಿರಣಿಗಳನ್ನು ದೆಹಲಿಯಲ್ಲಿರುವ ಸಮಿತಿಗೆ ರೆಫರ್ ಮಾಡಿದ್ದೇವೆ. ಗಣೇಶ್ ಗಿರಣಿಯದು ಬೇಗ ಬರಬಹುದು. ಆದರೆ ನಿಗದಿತ ದಿನಾಂಕವನ್ನು ಹೇಳುವುದಕ್ಕಾಗುವುದಿಲ್ಲ. ಈ ಎರಡು ಗಿರಣಿಗಳನ್ನು ಪುನರ್‌ಜೀವನಗೊಳಿಸಲಾಗುವುದು. ಈ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಮಿಲ್ ಮಾಲೀಕರು ಬರದಿದ್ದರೆ ಅವರನ್ನು ಕರೆಸಿ ಸರಿಯಾದ ಮಾರ್ಗದರ್ಶನ ನೀಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಪಂಪಾಪತಿ.—ಈ ಬಿ. ಐ. ಎಫ್. ಆರ್. ಘಟಕಗಳಲ್ಲಿ ಪುನರ್ ಜೀವನಗೊಳಿಸಿದರೂ ಕಾರ್ಮಿಕರ ಮತ್ತು ಮಾಲೀಕರ ಮಧ್ಯೆ ಒಂದು ಅಗ್ರಿಮೆಂಟ್ ಆಗಬೇಕಾಗಿದೆ, ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕಾರ್ಮಿಕ ಸಚಿವರು ಸಭೆ ಕರೆದರೂ ಆ ಸಭೆಗೆ ಅವರು ಬರಲಿಲ್ಲ. ಮತ್ತು ಕಾರ್ಮಿಕ ಆಯುಕ್ತರು ಮಾಲೀಕರನ್ನು ಕೇಳಿ ದಿನಾಂಕ ಗೊತ್ತು ಮಾಡಿದ್ದರೂ ಸಭೆಗೆ ಬರಲಿಲ್ಲ. ಬಿ. ಐ. ಎಫ್. ಆರ್. ನವರು ತೀರ್ಮಾನ ತೆಗೆದುಕೊಳ್ಳುವುದು ಕಳವಾಗಬಹುದು. ಆದ್ದರಿಂದ ಆದಷ್ಟು ಬೇಗ ಅವರನ್ನು ಕರೆಸಿ ಅವರ ಮಧ್ಯೆ ಇರತಕ್ಕಂಥ ಅಭಿಪ್ರಾಯ ಭೇದವನ್ನು ಸರಿ ಮಾಡಿ ಒಂದು ಒಪ್ಪಂದ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಹೆಚ್. ಪಟೀಲ್.—ಪ್ರಯತ್ನ ಮಾಡುತ್ತಿದ್ದೇನೆ. ಆ ಪ್ರಯತ್ನವನ್ನು ಮುಂದುವರಿಸುತ್ತೇನೆ.